ಒಂದು ಬಗೆಯ ಕರ್ಮಸಿದ್ಧಾಂತವನ್ನು ನೆಚ್ಚಿಕೊಂಡಿರುವುದು ಇಲ್ಲಿ ಎದ್ದು ಕಾಣುವ ಅಂಶ.

ಮೊದಲಿಗೆ ಇಲ್ಲಿ ಬರುವ ವಿದ್ಯಮಾನ ವಲಸೆ ಮತ್ತು ಪೌರತ್ವದ್ದು, ಅದಕ್ಕೆ ತಳುಕು ಹಾಕಿಕೊಂಡಂತೆ ಅರ್ಥ ಮತ್ತು ಧರ್ಮದ ಪ್ರಶ್ನೆಗಳು ಬರುತ್ತವೆ. ವಸುಧೇಂದ್ರ ಅವರ ಪ್ರಬುದ್ಧ ಮತ್ತು ಆಳವಾದ ವೈಚಾರಿಕತೆ ಈ ಹದಿನೈದನೆಯ ಶತಮಾನದ ಅವಿದ್ಯಾವಂತ ಮಂದಿಯ ಮಾತುಗಳಲ್ಲಿ ಕೊಂಚ ಅಸಹಜ ಎನಿಸಬಹುದಾದರೂ ಅವುಗಳ ಸಮಕಾಲೀನ ಅರ್ಥಪೂರ್ಣತೆ ಮತ್ತು ಅಗತ್ಯ ಎರಡೂ ನಿರ್ಲಕ್ಷಿಸಲಾರದಷ್ಟು ಮಹತ್ವ ಹೊಂದಿವೆ.

ಯಹೂದಿಗಳ ಸಮಸ್ಯೆಯ ಬಗ್ಗೆ, ಅವರ ಜಾಣತನ, ಆರ್ಥಿಕ ಮುಂಗಾಣುವಿಕೆಯ ಕೌಶಲ ಮುಂತಾದರ ಬಗ್ಗೆ ಹೇಳುತ್ತಲೇ ಇಲ್ಲಿ ನಮಗೆ ಹಿಟ್ಲರನ ಉಗಮದ ಬೀಜಗಳು ಆಗಲೇ ಹೇಗೆ ಮೊಳಕೆಯೊಡೆಯತೊಡಗಿದ್ದವು ಎನ್ನುವುದನ್ನೂ ಕಾಣಿಸುತ್ತಿದ್ದಾರೆ ಅವರು.

ಸ್ಪೇನಿನ ರಾಜಕುಮಾರಿ ಇಸಾಬೆಲ್ಲಾಳ ಜೊತೆಗಿನ ಮದುವೆಯೇ ಮುಖ್ಯವೆನಿಸಿ ತನ್ನ ದೇಶದ ಇಪ್ಪತ್ತು ಸಾವಿರಕ್ಕೂ ಹೆಚ್ಚು ಯಹೂದಿಗಳ ಬಲಾತ್ಕಾರದ ಸಾಮೂಹಿಕ ಮತಾಂತರಕ್ಕೆ ಮುಂದಾಗುವ ಪೋರ್ಚುಗಲ್ಲಿನ ರಾಜ ಮ್ಯಾನ್ಯುಯಲ್ ನಮಗೆ ವಿವೇಚನೆಯಿಲ್ಲದವನಂತೆ ಕಂಡರೆ ಅದು ನಮ್ಮ ತಪ್ಪು. ಅವನ ಈ ನಿರ್ಧಾರಕ್ಕೆ ಹೆಣ್ಣು, ಕಾಮ, ಸ್ವಾರ್ಥಗಳಿಗಿಂತ ದೇಶದ ಹದಗೆಟ್ಟ ಆರ್ಥಿಕ ಸ್ಥಿತಿ ಸೃಷ್ಟಿಸಿದ ಅನಿವಾರ್ಯ ಪರಿಸ್ಥಿತಿ ಕಾರಣ ಎನ್ನುವತ್ತ ನಮ್ಮ ಗಮನ ಸೆಳೆಯುವ ಕಾದಂಬರಿ, ಒಂದು ಪ್ರಭುತ್ವಕ್ಕೆ ಮತಾಂತರ ಎಂಬುದು ಎಷ್ಟು ಅರ್ಥಹೀನ ಮತ್ತು 'ಅರ್ಥ'ಪೂರ್ಣ ಎರಡೂ ಆಗಿರುತ್ತದೆ ಎನ್ನುವುದನ್ನು ಇಲ್ಲಿ ವಿಭಿನ್ನ ಮತ, ಸಂದರ್ಭಗಳಲ್ಲಿ ಚಿತ್ರಿಸಿರುವ ಬಗೆ ಮನಸೆಳೆಯುವಂತಿದೆ.

ಕಾದಂಬರಿಯ ಮತ್ತೊಂದು ಪ್ರಧಾನ ಅಂಶ ಕಾದಂಬರಿಯ ಉದ್ದಕ್ಕೂ ಸಹಜವಾಗಿ ಕಾಣಸಿಗುವ ಸ್ತ್ರೀಪರ ದೃಷ್ಟಿಕೋನ; ಆಕೆಯ ಶೋಷಣೆ, ಅವಳ ಮೇಲಿನ ದೌರ್ಜನ್ಯ, ಹಿಂಸೆ ಮತ್ತು ಅವಳನ್ನು ಕೇವಲ ಭೋಗದ ವಸ್ತು ಎಂಬಂತೆ ಪರಿಗಣಿಸುತ್ತಿದ್ದ ಬಗ್ಗೆ ಎದ್ದು ಕಾಣುವ ಪ್ರತಿರೋಧ. ಬೆಲ್ಲಾಳ ವ್ಯಕ್ತಿತ್ವದಲ್ಲಿಯೇ ಈ ಅಂಶ ಸಾಕಷ್ಟು ಸೂಚ್ಯವಾಗಿ ನಮಗೆ ಕಂಡು ಬಂದರೂ, ಅದು ಸ್ಪಷ್ಟವಾಗುತ್ತ ಹೋಗುವುದು ಹಂಪಮ್ಮ, ಗುಣಸುಂದರಿ, ಚಂಪಕ್ಕ, ಅಗ್ವೇದ (ಆನ್ರಿಕ್), ತೆಂಬಕ್ಕ ಮುಂತಾದವರ ಜೀವನಗಾಥೆಯ ಸಂದರ್ಭದಲ್ಲಿಯೇ.

ಕಾದಂಬರಿಯ ರಂಜಕತೆ ಹೆಚ್ಚಿಸಲು, ಕಥನದ ಕೌತುಕ ಉಳಿಸಿಕೊಂಡು ಬರಲು ಮತ್ತು ತಾಂತ್ರಿಕವಾಗಿ ಇಲ್ಲಿನ ಕತೆಯ ಚೌಕಟ್ಟಿಗೊಂದು ಆಕೃತಿ ತರುವುದಕ್ಕಾಗಿ ಅಳವಡಿಸಿದ ಕೆಲವೊಂದು ತಿರುವುಗಳು, ಬೆಳವಣಿಗೆಗಳು, ಕ್ಲೈಮ್ಯಾಕ್ಸುಗಳು ಕೊಂಚ ಅಸಹಜ ಎನಿಸುವಂತಿವೆ. ಗೇಬ್ರಿಯಲ್ ಮತ್ತು ಬೆಲ್ಲಾ, ತುಂಗೆಯ ಮಡಿಲಲ್ಲಿ ಬಂಗಾರವರ್ಣದ ಮೀನುಗಳ ಕುಟುಂಬ, ಅಡವಿಸಾಮಿಯ ಮರುಭೇಟಿಗಳಾಗಲಿ, ಅಡವಿಸಾಮಿ ಹಚ್ಚೆ ತಿದ್ದುವ ಪ್ರಸಂಗವಾಗಲಿ ತಾಂತ್ರಿಕ ಸಂಯೋಜನೆಯ ದೃಷ್ಟಿಯಿಂದ ಆ ಕ್ಷಣಕ್ಕೆ ಮೆಚ್ಚುಗೆಯಾದರೂ ಸಿನಿಮೀಯ ಎನಿಸುತ್ತವೆ.

ಇತಿಹಾಸ ನಮಗೆ ಸಾಕಷ್ಟು ಪಾಠಗಳನ್ನು ಕಲಿಸುತ್ತದೆ. ನಾವು ಅದನ್ನೆಲ್ಲ ಕಲಿತಿದ್ದೇವೆ ಮತ್ತು ಮರೆತಿದ್ದೇವೆ ಕೂಡ. ಅದರತ್ತ ಹಲವು ವಿಧದ, ಹಲವು ಕೋನದ ಹಿನ್ನೋಟ ಸಾಧ್ಯವಿದೆ. ಅದು ಆಗಾಗ ಅಗಾಧ ಆಗಸವನ್ನು, ಸಾಗರವನ್ನು ದಿಟ್ಟಿಸಿದಂತೆ. ಅದರ ಅಗಾಧತೆ ನಮಗೆ ಕೊನೆಗೂ ಅರ್ಥವಾಗದೇ ಹೋದರೂ, ಅದು ನಮ್ಮ ಅಸ್ತಿತ್ವದ ನಗಣ್ಯತನವನ್ನು ನಮ್ಮದೇ ಅರಿವಿಗೆ ತರದೇ ಇರುವುದಿಲ್ಲ. ಚರಿತ್ರೆಯ ಹೊರಳುನೋಟ ಅಂಥ ದರ್ಶನವೊಂದನ್ನು ದಯಪಾಲಿಸಬೇಕು ಎನ್ನುವುದಾದರೆ ವಸುಧೇಂದ್ರರ ಈ ಕಾದಂಬರಿ ಅದನ್ನು ಯಶಸ್ವಿಯಾಗಿ ಮಾಡುತ್ತದೆ.